ಮೈಸೂರು ತಾಲ್ಲೂಕು ಪಂಚಾಯತಿಗಳ ಲೆಕ್ಕಪತ್ರಗಳ ಆಡಿಟ್ ಮಾಡುವುದು.

2351(2929)

ಶ್ರೀ ಗುರುಸ್ವಾಮಿ ಎ.ಎಸ್.(ಚಾಮುಂಡೇಶ್ವರಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ತಾಲ್ಲೂಕಿನಲ್ಲಿ ಪಂಚಾಯತಿಗಳ ಲೆಕ್ಕ ಪತ್ರಗಳನ್ನು ಆಡಿಟ್ ಮಾಡಲಾಗಿದೆಯೇ?

ಆಗಿದ್ದ ಪಕ್ಷದಲ್ಲಿ Audit Objection ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ. ಹಣ ದುರುಪಯೋಗದ ಪ್ರಕರಣಗಳು ಏನಾದರೂ ಬೆಳಕಿಗೆ ಬಂದಿದೆಯೆ, ಎಷ್ಟು ಪ್ರಕರಣಗಳಲ್ಲಿ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳು ಈ Audit Objections ನಿಂದ ಸದಸ್ಯತ್ವ ಕಳೆದುಕೊಂಡಿದ್ದಾರೆ?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್):

ಅ) 1998-99ನೇ ಸಾಲಿನವರೆಗೂ ಮೈಸೂರು ತಾಲ್ಲೂಕಿನಲ್ಲಿ ಎಲ್ಲಾ ಪಂಚಾಯತಿಗಳ ಲೆಕ್ಕ ಪತ್ರಗಳನ್ನು ಆಡಿಟ್ ಮಾಡಿದೆ.

ಆ) ಆಕ್ಷೇಪಿಸಿರುವ ಮೊಬಲಿಗೆ ವೋಚರ್‌ಗಳನ್ನು ಹಾಜರುಪಡಿಸಲು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಕ್ರಮ ತೆಗೆದುಕೊಂಡಿರುತ್ತಾರೆ. 1999-2000ನೇ ಸಾಲಿನಲ್ಲಿ ಆಡಿಟ್ ಮಾಡುವಾಗ ಹಾಜರುಪಡಿಸಿ ಆಕ್ಷೇಪಣೆ ತೀರುವಳಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಹಣ ದುರುಪಯೋಗದ ಪ್ರಕರಣ ಯಾವುದೂ ಗಮನಕ್ಕೆ ಬಂದಿರುವುದಿಲ್ಲ. ಆಕ್ಷೇಪಣೆ ಮತ್ತು ವಸೂಲಾತಿಗಳನ್ನು ಮಾತ್ರ ಆಡಿಟ್ ವರದಿಗಳಲ್ಲಿ ಕಾಣಿಸಲಾಗಿರುತ್ತದೆ. ಈ ಆಡಿಟ್ ಆಕ್ಷೇಪಣೆಯ ಆಧಾರದ ಮೇಲೆ ಯಾರೂ ಸದಸ್ಯತ್ವ ಕಳೆದುಕೊಂಡಿರುವುದಿಲ್ಲ.

ಪಂಚಾಯಿತಿಗಳ ಅಡಿಯಲ್ಲಿ ಅಕ್ರಮವಾಗಿ ಖಾತೆ ಬದಲಾವಣೆ.

2352(2930)

ಶ್ರೀ ಎ.ಎಸ್. ಗುರುಸ್ವಾಮಿ(ಚಾಮುಂಡೇಶ್ವರಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ಸುತ್ತಲೂ ಬರುವ ಮೈಸೂರು ತಾಲ್ಲೂಕಿನಲ್ಲಿ